# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2254 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 26/03/2026 |
| ಉತ್ತರಿಸುವ ಸಚಿವರು: | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ 'ಬೀದರ್ ಕ್ರಾಂತಿ ಕನ್ನಡ ದಿನಪತ್ರಿಕೆಯನ್ನು ಸರ್ಕಾರದ ಮಾಧ್ಯಮ ಪಟ್ಟಿಯಿಂದ (Media List) ಅನರ್ಹಗೊಳಿಸಿ/ಬ್ಯಾನ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರದ ನಿಲುವೇನು; | ಬೀದರ್ ಜಿಲ್ಲೆಯಿಂದ ಪ್ರಕಟವಾಗುತ್ತಿರುವ "ಬೀದರ್ ಕ್ರಾಂತಿ" ಕನ್ನಡ ದಿನ ಪತ್ರಿಕೆಯು ಜಾಹೀರಾತು ಅನುಷ್ಠಾನ ನಿಯಮಗಳನ್ನು ಉಲ್ಲಂಘಿಸಿರುವುದು ಪ್ರಾಥಮಿಕ ಪರಿಶೀಲನೆಯ ಸಮಯದಲ್ಲಿ ಕಂಡು ಬಂದಿದ್ದರಿಂದ ಇಲಾಖಾ ಮುಖ್ಯಸ್ಥರಿಗೆ ಪ್ರದತ್ತವಾದ ಅಧಿಕಾರ ದನ್ವಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿ ಆದೇಶ ಸಂಖ್ಯೆ: DIPR-20011/67/C2/ 1037355/2023-CP-DIPR/1908-15, ದಿನಾಂಕ:13-02-2024 ರಲ್ಲಿ ಬೀದರ್ ಕ್ರಾಂತಿ ಕನ್ನಡ ದಿನ ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ಅನರ್ಹಗೊಳಿಸಿ ಅಮಾನತ್ತಿನ ಲ್ಲಿಡಲಾಗಿತ್ತು. |
| ಆ) | ಸದರಿ ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ಕೈಬಿಡಲು ಕಾರಣವಾದ ನಿರ್ದಿಷ್ಟ ಲೋಪದೋಷಗಳೇನು; (ಸಂಪೂರ್ಣ ವಿವರ ನೀಡುವುದು); ನಂತರ ಯಾವ ಆಧಾರ ಅಥವಾ ಮಾನದಂಡಗಳ ಮೇಲೆ ಈ ಪತ್ರಿಕೆಯನ್ನು ಪುನ: ಪಟ್ಟಿಗೆ ಸೇರಿಸಿಕೊಳ್ಳಲಾಯಿತು; | ಬೀದರ್ ಕ್ರಾಂತಿ ಕನ್ನಡ ದಿನ ಪತ್ರಿಕೆ ವಿರುದ್ಧ ಸಲ್ಲಿಕೆಯಾಗಿದ್ದ ದೂರಿನನ್ವಯ ಪತ್ರಿಕೆಯು ದಿನಾಂಕ: 30-10-2021ರ ಶನಿವಾರದಂದು (ಸಂಪುಟ-17, ಸಂಚಿಕೆ -262 ಪುಟ 4) ಒಂದೇ ದಿನ ವಿಭಿನ್ನ ರೀತಿಯ ಎರಡು ಸಂಚಿಕೆಗಳಲ್ಲಿ ಪ್ರಕಟವಾಗಿರುವುದು ಪ್ರಾಥಮಿಕವಾಗಿ ಸಂಚಿಕೆಗಳ ಆಧಾರದ ಮೇಲೆ ತಿಳಿದು ಬಂದಿದ್ದರಿಂದ ಜಾಹೀರಾತು ಅನುಷ್ಠಾನ ನಿಯಮಗಳನ್ವಯ ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ಅನರ್ಹಗೊಳಿಸಿ ಅಮಾನತ್ತಿನಲ್ಲಿ ಇರಿಸಲಾಗಿತ್ತು. ಈ ಕುರಿತು ಇಲಾಖಾ ಮುಖ್ಯಸ್ಥರಿಂದ ಸಂಪಾದಕರಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿದೆ ಹಾಗೂ ಇಲಾಖೆಯ ಅಧಿಕಾರಿಗಳ ತಂಡದಿಂದ ವಿಚಾರಣೆ ನಡೆಸಿ ವರದಿಯನ್ನು ಪಡೆಯಲಾಗಿದೆ.<br><br>"ಬೀದರ್ ಕ್ರಾಂತಿ" ಪತ್ರಿಕೆಯ ಸಂಪಾದಕರು ಪತ್ರಿಕೆಯ ವಿನ್ಯಾಸ ಹಾಗೂ ಪುಟಕ್ಕೆ ಸಂಬಂಧಿಸಿದ ಪೆನ್ ಡ್ರೈವ್ ಕಳೆದು ಹೋಗಿರುವ ಬಗ್ಗೆ ಗಾಂಧಿ ಗಂಜ್ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಗಾಂಧಿ ಗಂಜ್ ಪೊಲೀಸ್ ಠಾಣೆ ಇವರು ಪೆನ್ ಡ್ರೈವ್ ಕಳೆದು ಹೋದ ಬಗ್ಗೆ ಮಾಹಿತಿ ಪಡೆದುಕೊಂಡು ಎಲ್ಲಾ ಕಡೆ ಹುಡುಕಲಾಗಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲವೆಂದು ಅರ್ಜಿದಾರರಿಗೆ ಹಿಂಬರಹ ನೀಡಿ ಪ್ರಕರಣವನ್ನು ಮುಕ್ತಾಯ ಮಾಡಿರುತ್ತಾರೆ.<br><br>ಬೀದರ್ ಕ್ರಾಂತಿ ಪತ್ರಿಕೆಯ ವಿರುದ್ಧ ದೂರು ಸಲ್ಲಿಸಿದ್ದ ದೂರುದಾರರು ವಾರ್ತಾ ಆಯುಕ್ತರಿಗೆ ಮನವಿ ಸಲ್ಲಿಸಿ, |

| | | |
|---|---|---|
| | | ಪತ್ರಿಕೆಯ ಸಂಪಾದಕರ ಗಮನಕ್ಕೆ ಬಾರದೆ ಈ ರೀತಿ ವಿಭಿನ್ನ ಸಂಚಿಕೆಗಳು ಪ್ರಕಟವಾಗಿದ್ದು, ಇದರಲ್ಲಿ ಪತ್ರಿಕೆಯ ಸಂಪಾದಕರ ತಪ್ಪು ಇಲ್ಲದಿರುವುದರಿಂದ, ತಮ್ಮ ದೂರನ್ನು ಗಂಭೀರವಾಗಿ ಪರಿಗಣಿಸದಿರಲು ಕೋರಿರುತ್ತಾರೆ.<br><br>ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಪತ್ರಿಕೆಯ ಸಂಪಾದಕರೇ ಎರಡು ವಿಭಿನ್ನ ಸಂಚಿಕೆಗಳನ್ನು ಪ್ರಕಟಿಸಿರುವುದು ಸಾಬೀತಾಗಿಲ್ಲದ ಕಾರಣ ಪತ್ರಿಕೆಯನ್ನು ಆಯುಕ್ತರ ಅಧಿಕಾರ ವ್ಯಾಪ್ತಿಯಡಿ ಪುನಃ ಮಾಧ್ಯಮ ಪಟ್ಟಿಗೆ ಸೇರಿಸಿಕೊಳ್ಳಲಾಗಿದೆ. |
| ಇ) | ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಒಂದೇ ದಿನ ಎರಡು ಆವೃತ್ತಿಗಳ ಹೆಸರಿನಲ್ಲಿ ಅಥವಾ ಅಕ್ರಮವಾಗಿ ಸರ್ಕಾರಿ ಜಾಹೀರಾತುಗಳನ್ನು ಪಡೆದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿರುವುದು ತನಿಖೆಯಲ್ಲಿ ಸಾಬೀತಾಗಿದೆಯೇ: ಹಾಗಿದ್ದಲ್ಲಿ, ಸಾರ್ವಜನಿಕ ಹಣದ ದುರುಪಯೋಗಕ್ಕಾಗಿ ಪತ್ರಿಕೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸದಿರಲು ಕಾರಣಗಳೇನು: | ಈ ಹಗರಣದ ಕುರಿತು ಸಂಪೂರ್ಣ ವರದಿಯನ್ನು ಆಯುಕ್ತರಿಂದ ಪಡೆದು ಮತ್ತೊಮ್ಮೆ ನಿಯಮಾನುಸಾರ ಪರಿಶೀಲಿಸಲಾಗುವುದು |
| ಈ) | ಈ ಹಗರಣದಲ್ಲಿ ಭಾಗಿಯಾದ ಪತ್ರಿಕೆಯ ಮಾಲೀಕರು ಮತ್ತು ಇದಕ್ಕೆ ಸಹಕರಿಸಿದ ಇಲಾಖೆಯ ಅಧಿಕಾರಿಗಳ ವಿರುದ್ಧ ಇದುವರೆಗೂ ಕೈಗೊಂಡಿರುವ ಶಿಸ್ತುಕ್ರಮಗಳೇನು: ಸರಿಯಾದ ತನಿಖೆ ನಡೆಸದೆ ವಿಳಂಬ ಮಾಡುತ್ತಿರುವುದು ತಪ್ಪಿತಸ್ಥರಿಗೆ ರಕ್ಷಣೆ ನೀಡಿದಂತಾಗುವುದಿಲ್ಲವೇ? | ಈ ಹಗರಣದ ಕುರಿತು ಸಂಪೂರ್ಣ ವರದಿಯನ್ನು ಆಯುಕ್ತರಿಂದ ಪಡೆದು ಮತ್ತೊಮ್ಮೆ ನಿಯಮಾನುಸಾರ ಪರಿಶೀಲಿಸಲಾಗುವುದು |

**ಕಸಿಐ-ವಿಐಪಿ/70/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ